# ಅಲ್ಪಾವಧಿಯ ರಫ್ತು ನಿರ್ವಹಣಾ ತರಬೇತಿ ಕಾರ್ಯಕ್ರಮ

**ಉದ್ದೇಶ:** ರಫ್ತು ಮಾರುಕಟ್ಟೆ, ಕಾರ್ಯವಿಧಾನಗಳು, ದಾಖಲಾತಿ, ಪ್ಯಾಕೇಜಿಂಗ್, ಸಾಗಾಣಿಕೆ ಹಾಗೂ ರಫ್ತಿಗಾಗಿ ಇರುವ ವಿವಿಧ ಏಜೆನ್ಸಿಗಳು ನೀಡುವ ಸೌಲಭ್ಯಗಳು ಮತ್ತು ರಫ್ತಿಗೆ ಸಂಬಂಧಿಸಿದ ವಿವಿದ ವಿಷಯಗಳ ಬಗ್ಗೆ ತರಬೇತಿ ನೀಡಲಾಗುವುದು.

**ಭಾಗವಹಿಸುವವರು:** ಆಸಕ್ತಿಯುಳ್ಳ ಉದ್ದಿಮೆದಾರರು/ ಬಾವಿ ಉದ್ದಿಮೆದಾರರು

**ರಫ್ತು ನಿರ್ವಹಣಾ ತರಬೇತಿ ಕಾರ್ಯಕ್ರಮದ ಬಗ್ಗೆ:**

- ವಿಟಿಪಿಸಿ ಸಂಸ್ಥೆಯು ಐದು/ ಆರು ದಿನಗಳ ಅಲ್ಪಾವಧಿಯ ತರಬೇತಿ ಕಾರ್ಯಕ್ರಮವನ್ನು ನಡೆಸುತ್ತದೆ.
- ರಫ್ತು ಕ್ಷೇತ್ರದ ಪರಿಣಿತರಿಂದ ಉಪನ್ಯಾಸ ನೀಡಲಾಗುವುದು.
- ತರಬೇತಿ ಕಾರ್ಯಕ್ರಮಕ್ಕೆ ಪ್ರವೇಶವನ್ನು 25 ಅಭ್ಯರ್ಥಿಗಳಿಗೆ ಮಾತ್ರ ಸೀಮಿತಗೊಳಿಸಲಾಗಿದೆ.
- ತರಬೇತಿಯ ನಂತರ ತರಬೇತಿ ಪೂರ್ಣಗೊಳಿಸಿದ ಬಗ್ಗೆ ಪ್ರಮಾಣಪತ್ರಗಳನ್ನು ನೀಡಲಾಗುವುದು.

**ತರಬೇತಿಯ ಪ್ರಮುಖ ಅಂಶಗಳು:**

- ರಫ್ತು ವ್ಯವಹಾರ ಮತ್ತು WTOದ ಪರಿಚಯ
- ರಫ್ತಿಗೆ ಸಂಬಂಧಿಸಿದ ಸಂಸ್ಥೆಗಳ ಬಗ್ಗೆ ಮಾಹಿತಿ
- ವಿದೇಶಿ ವ್ಯಾಪಾರ ನೀತಿ ಬಗ್ಗೆ ಮಾಹಿತಿ
- ರಫ್ತು ಕೈಗೊಳ್ಳಲು ಅವಶ್ಯವಿರುವ ದಾಖಲಾತಿಗಳು ಹಾಗೂ ನಿಯಮಗಳ ಬಗ್ಗೆ ಮಾಹಿತಿ.
- ರಫ್ತು ಮಾರುಕಟ್ಟೆಗೆ ಸಂಬಂಧಿಸಿದಂತೆ ಉತ್ಪನ್ನದ ಬೆಲೆ ನಿಗದಿಪಡಿಸುವ ಬಗ್ಗೆ ಮಾಹಿತಿ
- ರಫ್ತು ಉತ್ತೇಜನಕ್ಕೆ ಹಣಕಾಸು ಸಂಸ್ಥೆಗಳ ಮಾಹಿತಿ ನೀಡುವುದು
- ವಿವಿದ ರಫ್ತು ಉತ್ತೇಜನ ಸಂಸ್ಥೆಗಳಿಂದ ನೀಡಲಾಗುತ್ತಿರುವ ಯೋಜನೆಗಳ ಮಾಹಿತಿ
- ರಫ್ತಿಗೆ ಸಂಬಂಧಿಸಿದಂತೆ ಕಸ್ಟಮ್ಸ್ ಮತ್ತು ಸೆಂಟ್ರಲ್ ಎಕ್ಸೈಸ್ ನಿಯಮಾವಳಿಗಳು ಮತ್ತು ವಿಮೆಯ ಬಗ್ಗೆ ಮಾಹಿತಿ.
- ಇ-ಕಾಮರ್ಸ್ ಮತ್ತು ಡಿಜಿಟಲ್ ಮಾರ್ಕೆಟಿಂಗ್
- ರಫ್ತು ಕೈಗೊಳ್ಳಲು ಇರುವ ಸಹಾಯ ಮತ್ತು ಸವಲತ್ತುಗಳ ಬಗ್ಗೆ ಮಾಹಿತಿ

**ನೋಂದಣಿ:**

ಆಸಕ್ತ ಅಭ್ಯರ್ಥಿಗಳು ನಮ್ಮ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಗೂಗಲ್ ಫಾರ್ಮ್ ಅನ್ನು ಭರ್ತಿ ಮಾಡುವ ಮೂಲಕ ತರಬೇತಿಗೆ ನೋಂದಾಯಿಸಿಕೊಳ್ಳಬಹುದು. ತರಬೇತಿ ಶುಲ್ಕವನ್ನು ಆನ್‌ಲೈನ್ ಮೂಲಕ ಮಾತ್ರ ಪಾವತಿ ಮಾಡುವುದು.

******ಸೂಚನೆ: ತರಬೇತಿ ಕಾರ್ಯಕ್ರಮಕ್ಕೆ ನೋಂದಾಯಿಸಿಕೊಂಡ ಅಭ್ಯರ್ಥಿಗಳಿಗೆ ತರಬೇತಿಯ ದಿನಾಂಕ, ಸಮಯ ಮತ್ತು ಶುಲ್ಕದ ವಿವರ ಹಾಗೂ ಆನ್ ಲೈನ್ ಮೂಲಕ ಶುಲ್ಕ ಪಾವತಿ ಮಾಡುವ ವಿವರಗಳನ್ನು ಪ್ರತ್ಯೇಕವಾಗಿ ತಿಳಿಸಲಾಗುವುದು.**

**ಸ್ಥಳ: ವಿಟಿಪಿಸಿ ತರಬೇತಿ ಕೊಠಡಿ, ಕಸ್ತೂರಬಾ ರಸ್ತೆ, ಬೆಂಗಳೂರು – 560 001**

ಇ-ಮೇಲ್: vtpckarnataka@gmail.com ವೆಬ್ ಸೈಟ್: www.vtpc.karnataka.gov.in

ದೂರವಾಣಿ: 080 - 2253 4444 / 9483534444